ಅಧ್ಯಕ್ಷರು:- ಪೈವೇಟ್ ಬಸ್‌ಗೆ ಮಿನರ್ವಮಿಲ್ಸ್ ಗ್ರೌಂಡ್ಸ್‌ನಲ್ಲಿ ಕೇಳಿರುವುದು ನಗರಾಭಿವೃದ್ಧಿ ಸಚಿವರಿಗೆ ಬರುತ್ತದೆ. He will have to answer. I will get it answered from Urban Development Department.

ವಿಷಯ:- ರಾಜ್ಯರಸ್ತೆ ಸಾರಿಗೆ ಬಗ್ಗೆ ಶ್ರೀ ಪಿ.ಜಿ.ಆರ್.ಸಿಂಧ್ಯರವರ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸದನ ಸಮಿತಿ ವರದಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 85 (601)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದ ರಸ್ತೆ ಸಾರಿಗೆ ಸಂಸ್ಥೆಯ ಕಾರ್ಯದಕ್ಷತೆಯ ಬಗ್ಗೆ ಪಿ.ಜಿ.ಆರ್.ಸಿಂಧ್ಯಾರವರ ಅಧ್ಯಕ್ಷತೆಯ ಸದನ ಸಮಿತಿ ವರದಿ ಸರ್ಕಾರದವರ ಕೈ ಸೇರಿದೆಯೇ?

ಆ) ಹಾಗಿದ್ದಲ್ಲಿ, ಸಂಸ್ಥೆಗೆ ಆದಾಯ ಬರುವಂತಹ ಯಾವ ಯಾವ ಶಿಫಾರಸ್‌ಗಳನ್ನು ಜಾರಿಗೊಳಿಸಲಾಗಿದೆ, ಜಾರಿಗೊಳಿಸದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಇ) ವರದಿಯಲ್ಲಿ ಸಂಸ್ಥೆಯ ಆಡಳಿತದಲ್ಲಿ ಕಾರ್ಮಿಕರಿಗೆ ಸ್ಥಾನಮಾನ ಕಲ್ಪಿಸಿಕೊಡಬೇಕೆಂಬ ಶಿಫಾರಸ್‌ನ್ನು ಸರ್ಕಾರವು ಅನುಷ್ಠಾನಕ್ಕೆ ತಂದಿದೆಯೇ?

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು):-

ಅ) ಹೌದು.

ಆ) ಸದರಿ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಪರಿಶೀಲಿಸಲಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ಈಗಿನ ಪಿಜಿಆರ್ ಸಿಂಧ್ಯಾರವರ ಅಧ್ಯಕ್ಷತೆಯಲ್ಲಿ ಸಾರಿಗೆ ವ್ಯವಸ್ಥೆ ರಾಜ್ಯದಲ್ಲಿ ಅನುಕೂಲವಾಗಬೇಕೆಂದು ಹಿಂದೆ ಒಂದು ಸಮಿತಿ ರಚನೆಯಾಗಿತ್ತು. ಆ ಸಮಿತಿ ವರದಿ ಸರ್ಕಾರಕ್ಕೆ ತಲುಪಿದೆ ಎಂದು ಅವರು ಹೇಳಿದ್ದಾರೆ. ಈ ವರದಿಯ ಎಷ್ಟು ಶಿಫಾರಸ್‌ಗಳನ್ನು ಸರ್ಕಾರ ಒಪ್ಪಿದೆ? ಏಕೆಂದರೆ ಆ ಸಮಿತಿಗೆ ತಾವೇ, ಅಧ್ಯಕ್ಷರು, ನಾನೂ ಒಬ್ಬ ಸದಸ್ಯನಾಗಿದ್ದೆ, ಪಿಜಿಆರ್ ಸಿಂಧ್ಯಾರವರು ಸಾರಿಗೆ ಬಗ್ಗೆ ಹೆಚ್ಚು ಅಭ್ಯಾಸ ಮಾಡಿ ಕರ್ನಾಟಕವಲ್ಲದೆ ದೇಶಾದ್ಯಂತ ಸುತ್ತಿ ಸಾರಿಗೆ ಸಂಸ್ಥೆಗಳ ವ್ಯವಸ್ಥೆ ಸರಿಪಡಿಸುವ ಬಗ್ಗೆ ಒಂದು ವರದಿ ಕೊಟ್ಟಿದ್ದಾರೆ. ನನಗನ್ನಿಸುತ್ತದೆ ಅವರು ಈ ಕಡೆ ಏನಾದರೂ ಇದ್ದಿದ್ದರೆ ವರದಿಯನ್ನು ಅಕ್ಷರಶಃ ಒಪ್ಪಬೇಕು ಎಂದು ದಿನ ಗದ್ದಲ ಮಾಡುತ್ತಿದ್ದರು. ಸುದೈವ ಆ ಇಲಾಖೆಗೆ ಅವರೇ ಈಗ ಸಚಿವರಾಗಿದ್ದಾರೆ. ಆ ವರದಿಯಲ್ಲಿ ಎಷ್ಟು ಶಿಫಾರಸ್‌ಗಳನ್ನು ತಾವು ಒಪ್ಪಿಕೊಳ್ಳುತ್ತೀರಿ? ಅದರಲ್ಲೂ

ಪ್ರಾಮುಖ್ಯವಾಗಿರುವುದು ವ್ಯವಸ್ಥಾಪಕ ಮಂಡಲಿಯಲ್ಲಿ ಕಾರ್ಮಿಕವರ್ಗದವರನ್ನು ಸೇರಿಸುವುದು, ಅದಕ್ಕೆ ತಾವೇನು ಮಾಡಿದ್ದೀರಿ ಮತ್ತು ವಿದ್ಯಾರ್ಥಿಗಳಿಗೆ ಕೊಡುವ ಸಾರಿಗೆ ಪಾಸ್ ಹಣ ಸಾರಿಗೆ ಸಂಸ್ಥೆ ಕಟ್ಟಬೇಕೇ ಅಥವಾ ಸರ್ಕಾರ ಕಟ್ಟಬೇಕೇ? ವಿದ್ಯಾರ್ಥಿಗಳಿಗೆ ಪಾಸ್ ಕೊಡುವುದನ್ನು ಎಂದೂ ನಾನು ವಿರೋಧಿಸುವುದಿಲ್ಲ, ಅದನ್ನು ಕೊಡಬೇಕೆಂಬುದು ನನ್ನ ವಾದ ಮತ್ತು ಸಾರಿಗೆ ಸಂಸ್ಥೆಯ ಬೆಳವಣಿಗೆ ದೃಷ್ಟಿಯಿಂದ ನಿಮ್ಮ ವರದಿಯ ಯಾವ್ಯಾವ ಶಿಫಾರಸ್‌ನ್ನು ಈ ವರ್ಷ ಜಾರಿಗೆ ತರುತ್ತೀರೆಂಬುದನ್ನು ಹೇಳಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಅಧ್ಯಕ್ಷರೇ, ಅದೊಂದು ಉತ್ತಮವಾದ ವರದಿ ಎಂದು ಮಾನ್ಯ ವಾಟಾಳ್ ನಾಗರಾಜ್ ಹೇಳಿದ್ದಾರೆ, ಅದು ನಾನೊಬ್ಬನೇ ಕೊಟ್ಟಿರುವ ವರದಿಯಲ್ಲ. ಎಲ್ಲಾ ಪಕ್ಷಗಳ ಗೌರವಾನ್ವಿತ ಸದಸ್ಯರೂ ಸೇರಿ ನಾವು ರಾಜ್ಯದ ಸಾರಿಗೆ ಸಂಸ್ಥೆಯನ್ನು ಅಭ್ಯಾಸ ಮಾಡಿ ಆ ಸಮಿತಿಯ ಅಭಿಪ್ರಾಯವನ್ನು ನಾನು ಕೊಟ್ಟಿದ್ದೇನೆಯೇ ಹೊರತು ನನ್ನೊಬ್ಬನ ಅಭಿಪ್ರಾಯವಲ್ಲ. ಎರಡನೆಯದಾಗಿ ನಾನು ಆ ಕಡೆ ಇದ್ದಿದ್ದರೆ ಆ ವರದಿಯನ್ನು ಒಪ್ಪಲೇಬೇಕೆಂದು ದಿನಾ ನಾನು ಗದ್ದಲ ಮಾಡುತ್ತಿದ್ದೆ ಎಂದು ಹೇಳುತ್ತಾರೆ. ನಾನು ವಿಧಾನಸಭೆಯಲ್ಲಿ ಯಾವತ್ತೂ ಗದ್ದಲ ಮಾಡಿಲ್ಲವೆಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೇ, ತಮ್ಮಲ್ಲಿ ಮನವಿ ಕೊಡುತ್ತೇನೆ, ತಾವು ಹಿಂದಿನ ಕಡತಗಳನ್ನು ತೆಗೆಸಿ ನೋಡಿಬಿಡಿ ಉಪನಾಯಕರಾಗಿ ಅವರು ಗದ್ದಲ ಮಾಡದ ದಿನವೇ ಇಲ್ಲ. ಇವತ್ತು ಸಚಿವರಾಗಿ ಗಂಭೀರವಾಗಿ ಹೇಳಬೇಕು ಆದ್ದರಿಂದ ಹಾಗೆ ಹೇಳುತ್ತಿದ್ದಾರೆ. ಅದರ ಬಗ್ಗೆ ನನ್ನ ತಕರಾರಿಲ್ಲ.

+ಶ್ರೀ ಪಿ.ಜಿ.ಆರ್ ಸಿಂಧ್ಯಾ:- ನನ್ನ ಧ್ವನಿ ಅವರಿಗೆ ಗದ್ದಲವಾಗಿ ಕೇಳಿಸಿದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ ಇಷ್ಟೇ ಹೇಳುತ್ತೇನೆ, ಅಧ್ಯಕ್ಷರೇ, ಸಾರಿಗೆ ಸಂಸ್ಥೆ ಬಗ್ಗೆ ನಾವು ಎರಡು ಮೂರು ಪ್ರಮುಖ ವಿಚಾರಗಳ ಬಗ್ಗೆ ನಿರ್ಧಾರ ಮಾಡಬೇಕಾಗಿದೆ. ಆ ಸಮಿತಿಯ ಒಂದು ಶಿಫಾರಸಿನಂತೆ, 65 ಸಾವಿರ ಜನ ಕಾರ್ಮಿಕರಿದ್ದಾರೆ, 10 ಸಾವಿರಕ್ಕೂ ಹೆಚ್ಚು ಬಸ್ ಓಡಾಡುತ್ತಿವೆ, ಅರ್ನಿಂಗ್ ಏರಿಯಾಗಳಿಂದ ಲೂಸಿಂಗ್ ಏರಿಯಾಗಳಿಗೆ ಕಂಪನ್‌ಸೇಟ್ ಮಾಡಬೇಕಾಗಿದೆ. ಆದ್ದರಿಂದ ಕಾರ್ಪೊರೇಷನನ್ನು ಬಿಟಿಎಸ್‌ನಿಂದ ಸೆಪರೇಟ್ ಮಾಡಬೇಕು ಏಕೆಂದರೆ ತಮಗೆ ಗೊತ್ತಿರುವಂತೆ ಬೆಂಗಳೂರು ನಗರದಲ್ಲಿ ದಿನವೂ 25-30 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಾರೆ. ಆದ್ದರಿಂದ ಕಾರ್ಪೊರೇಷನ್ ಸೆಪರೇಟ್ ಮಾಡಬೇಕು, ಇದೊಂದು ಮೇಜರ್ ಶಿಫಾರಸ್ ಆ ಸಮಿತಿಯದ್ದು. ಹುಬ್ಬಳ್ಳಿ, ಗುಲ್ಬರ್ಗಗಳಿಗೆ ಒಂದೊಂದು ಕಾರ್ಪೊರೇಷನ್ ಮಾಡಬೇಕು, ಕೆಎಸ್‌ಆರ್‌ಟಿಸಿಯನ್ನು 4 ಸೆಪರೇಟ್ ಕಾರ್ಪೊರೇಷನ್‌ಗಳನ್ನಾಗಿ ಮಾಡಬೇಕು, ಎಂಬ ಸಮಿತಿಯ ಈ ಶಿಫಾರಸ್‌ಗಳನ್ನು ಕಾರ್ಯಗತ ಮಾಡಬೇಕಾಗಿದೆ; ಇದನ್ನು ಸಚಿವಸಂಪುಟದ ಮುಂದೆ ನಾನು ತರುವವನಿದ್ದೇನೆ.

ಇದಲ್ಲದೆ ಕಾರ್ಮಿಕರು ಆಡಳಿತದಲ್ಲಿ ಭಾಗವಹಿಸುವುದಕ್ಕೆ ಅವರಿಗೆ ಅವಕಾಶ ಮಾಡಿಕೊಡುವುದು, ವಿದ್ಯಾರ್ಥಿಗಳ ಪಾಸುಗಳ ಹಣವನ್ನು ಸರಕಾರವೇ ತುಂಬಿ ಕೊಡುವುದನ್ನು ಹಿಂದೆ ಮಾಡಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ, ಭಾಗಶಃ ಸ್ಟೂಡೆಂಟ್ ಪಾಸ್‌ಗಳಿಗೆ ಕೊಡುವಂತಹ ಹಣವನ್ನು ಸರಕಾರದವರು ಕೊಟ್ಟುಕೊಂಡು ಬಂದಿದ್ದಾರೆ. ಅದನ್ನು ಪೂರ್ತಿ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡಿದ್ದೇನೆ. ಅದರ ಬಗ್ಗೆ ಸಹ ಸರಕಾರದವರು ಸದ್ಯದಲ್ಲೇ ನಿಲುವನ್ನು ತೆಗೆದುಕೊಳ್ಳುವವರಿದ್ದೇವೆ. ಒಟ್ಟಾರೆ ಈ ವರದಿಯನ್ನು ಕಾರ್ಯಗತ ಮಾಡಲಿಕ್ಕೆ ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಅದನ್ನೂ ಸಹ ಪರಿಶೀಲನೆ ಮಾಡುತ್ತೇನೆ.

+ಶ್ರೀ ಎಂ.ಮಲ್ಲಿಕಾರ್ಜುನ ಖಿಗೆ:- ತಮ್ಮ ವರದಿಯ ಆಧಾರದ ಮೇಲೆ ಹಿಂದೆಯೂ ಕೂಡ ಸರಕಾರ ನಮ್ಮ ಆಜೀಜ್ ಸೇಠ್‌ರವರು ಇದ್ದಾಗ ಸಾಕಷ್ಟು ಇದರ ಬಗ್ಗೆ ಚರ್ಚೆಯಾಗಿ ಎಷ್ಟು ಭಾಗಗಳಲ್ಲಿ ಇದನ್ನು ಅಂದರೆ ಈ ಕಾರ್ಪೊರೇಷನ್ ಅನ್ನು ಡಿವೈಡ್ ಮಾಡಬೇಕೆಂದು ಚರ್ಚೆಯಾಯಿತು. ಕೆಲವು ಜನ ಇದನ್ನು ರೆವಿನ್ಯೂ ಡಿವಿಜನ್ ವೈಸ್ ಮಾಡಬೇಕೆಂದು ಹೇಳಿದರು. ಇನ್ನು ಕೆಲವು ಕಡೆ ಇದನ್ನು ಜಿಯಾಗ್ರಾಫಿಕಲ್ ಕಂಟಿನ್ಯೂಟಿ ನೋಡಿಕೊಂಡು ಅದು ಎಕನಾಮಿಕಲಿ ಫೀಸಿಬಲ್, ಎನ್ನುವಂತಹ ರೀತಿಯಲ್ಲಿ ಈ ಕಾರ್ಪೊರೇಷನ್ ಮಾಡಬೇಕೆಂದು, ಕೆಲವು ಸಲ ಆಗತಕ್ಕಂಥ 8 ಪ್ರಪೋಸಲ್ಸ್ ಬಂತು, ಇನ್ನು ಕೆಲವು ಕಡೆ 4 ಭಾಗ ಆಗಬೇಕೆಂಬ ಪ್ರಪೋಸಲ್ ಬಂತು. ಅದು ಒಂದು ಹಂತದಲ್ಲಿದೆ. ಎರಡು ಮೂರು ಜಾಸ್ತಿ ಕಡಿಮೆ ಮಾಡುವುದರಲ್ಲಿ ವ್ಯತ್ಯಾಸ ಆಯಿತು. ಆದರೆ ಈ ಕಾರ್ಪೊರೇಷನ್ ಅನ್ನು ಡಿವೈಡ್ ಮಾಡಬೇಕೆನ್ನುವುದರಲ್ಲಿ ಯಾರದ್ದೂ ಭಿನ್ನಾಭಿಪ್ರಾಯ ಇಲ್ಲ. ಎಲ್ಲರೂ ಒಪ್ಪಿಕೊಂಡಿದ್ದಾರೆ. ಅದು ಇಂಪ್ಲಿಮೆಂಟ್ ಆಗತಕ್ಕಂಥ ಹಂತದಲ್ಲಿದೆ. ತಕ್ಷಣ ಯಾವ ರೀತಿಯಾಗಿ ತಮಿಳುನಾಡಿನಲ್ಲಿ ಮತ್ತು ಆಂಧ್ರದಲ್ಲಿ ಅನೇಕ ಡಿವಿಜನ್ ಮಾಡಿದ್ದಾರೋ ಅದೇ ರೀತಿಯಾಗಿ ತಾವೂ ಕೂಡ ಬೇಗನೆ ಮಾಡುತ್ತೀರೋ ಹೇಗೆ ಎಂಬುದನ್ನು ತಿಳಿಸಬೇಕು. ಕೆಲವು ಕಡೆ ನ್ಯಾಷನಲೈಸ್ಡ್ ರೂಟಿನಲ್ಲಿ ಬಸ್‌ಗಳನ್ನು ನೀವು ಹಾಕುವುದಿಲ್ಲ; ಬೇರೆಯವರಿಗೂ ಕೊಡುವುದಿಲ್ಲ. ಯಾವುದು ಅರ್ನಿಂಗ್ ಏರಿಯಾ ಇದೆ ಅಲ್ಲಿ ಎಲ್ಲರೂ ಈವನ್ ಪಾಸಗಿಯವರೂ ಕೂಡ ಬೇರೆ ಏರಿಯಾಗೆ ಹೋಗುವುದಕ್ಕೆ ತಯಾರಿಲ್ಲ. ಯಾವ ಏರಿಯಾದಲ್ಲಿ ಡೀ-ನ್ಯಾಷನಲೈಸ್ಡ್ ರೂಟ್ಸ್ ಇರುತ್ತವೆ ಅದನ್ನು ಅವರಿಗೆ ಕೊಟ್ಟು ಬಿಡಿ. ಆದರೆ ಮೇನ್ ಅರ್ನಿಂಗ್ ಏರಿಯಾದಲ್ಲಿ ಕೂಡ ಅವರು ಕೈ ಹಾಕಿಕೊಂಡು ಬರುತ್ತಿದ್ದಾರೆ. ಅದನ್ನು ನಿಲ್ಲಿಸಿ. ಬೇಕಾದರೆ ನೀವು ಅಲ್ಲಿ ಹೆಚ್ಚು ಬಸ್ ಹಾಕಿ. ಡೀ ನ್ಯಾಷನಲೈಸ್ಡ್ ಏರಿಯಾದಲ್ಲಿ ಧಾರಾಳವಾಗಿ ಕೊಡಿ. ನಮ್ಮದು ಅಭ್ಯಂತರ ಇಲ್ಲ. ಆದರೆ ಅದೇ ಒಂದು ಗ್ರೌಂಡ್ ಮೇಲೆ ಇವತ್ತು ಲಾಸಾಗುತ್ತಿದೆ. ಇದನ್ನು ತಕ್ಷಣ ಮಾಡುತ್ತೀರೋ ಹೇಗೆ ಎನ್ನುವುದನ್ನು ತಾವು ಹೇಳಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಖಿರ್ಗಯವರು ಎರಡು ವಿಚಾರಗಳನ್ನು ಎತ್ತಿದ್ದಾರೆ. ಈ ಎರಡೂ ವಿಚಾರಗಳ ಪರಿಶೀಲನೆ ತೀವ್ರವಾಗಿ ಸರಕಾರದ ಮುಂದಿದೆ. ತಮ್ಮ ಸರಕಾರ ಇದ್ದಾಗ ಒಂದು ಸಚಿವ ಸಂಪುಟದ ಉಪಸಮಿತಿ ಮಾಡಿ ದೀರ್ಘವಾಗಿ

ಅದರ ಬಗ್ಗೆ ಚರ್ಚೆಯಾಗಿದ್ದು ಆದರೆ ಯಾವುದೇ ನಿರ್ದಿಷ್ಟವಾದ ಅಭಿಪ್ರಾಯಕ್ಕೆ ಬರುವುದಕ್ಕಾಗಿರಲಿಲ್ಲ. ನಮ್ಮ ಹಿಂದಿನ ಸರಕಾರದಲ್ಲಿ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿಯೂ ಕೂಡ ಸಚಿವ ಸಂಪುಟದ ಉಪಸಮಿತಿಯನ್ನು ಮಾಡಿ ಆ ಉಪಸಮಿತಿಯ ವರದಿ ಬರಬೇಕಾಗಿತ್ತು. ಅಷ್ಟರಲ್ಲಿ ಸಚಿವ ಸಂಪುಟದ ಪುನರ್ ರಚನೆಯಾಗಿ ಹೊಸ ಮುಖ್ಯಮಂತ್ರಿಗಳು ಬಂದಿದ್ದಾರೆ. ತಮಗೂ ಗೊತ್ತಿದೆ. ಹೊಸ ಮುಖ್ಯಮಂತ್ರಿಗಳ ಜೊತೆ ನಾನು ಈ ವಿಚಾರವನ್ನು ದೀರ್ಘವಾಗಿ ಚರ್ಚೆ ಮಾಡಿದ್ದೇನೆ ಮತ್ತು ಸಧ್ಯದಲ್ಲೇ ನಾನು ಕ್ರಮವನ್ನು ತೆಗೆದುಕೊಳ್ಳುವವನಿದ್ದೇನೆ. ಶಾಸಕರುಗಳ ಸಭೆಯಲ್ಲಿಯೂ ಕೂಡ ಇದರ ಬಗ್ಗೆ ಅಭಿಪ್ರಾಯವನ್ನು, ಅದರಲ್ಲೂ ವಿಶೇಷವಾಗಿ ಕಲ್ಬುರ್ಗಿ ವಿಭಾಗ, ಹುಬ್ಬಳ್ಳಿ ವಿಭಾಗ ಏನು ಇದೆ ಅದು ಸಂಪೂರ್ಣವಾಗಿ ರಾಷ್ಟ್ರೀಕರಣವಾಗಿರತಕ್ಕಂತಹ ವಿಭಾಗಗಳಾಗಿವೆ. ಆ ಭಾಗದ ಶಾಸಕರುಗಳು ಮುಖಂಡರುಗಳ ಅಭಿಪ್ರಾಯವನ್ನು ಇದರ ಬಗ್ಗೆ ಪಡೆದಿದ್ದೇನೆ. ಆದಷ್ಟು ಸರ್ವ ಸಮ್ಮತವಾದ ಅಭಿಪ್ರಾಯಗಳು ಈ ವಿಚಾರದಲ್ಲಿರುವುದನ್ನು ನಾನು ಮನಗಂಡಿದ್ದೇನೆ. ನ್ಯಾಷನಲೈಸ್ಡ್ ಏರಿಯಾದಲ್ಲೂ ರೂಟಿನಲ್ಲೂ ಸಹ ಖಾಸಗಿಯವರು ಓಡಿಸುತ್ತಿರುವುದು ನಮಗೆ ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಅನ್ನು ಡೆವಲಪ್ ಮಾಡಿ ಸಾಕಷ್ಟು ಬಸ್‌ಗಳನ್ನು ಹಾಕದೇ ಇರತಕ್ಕಂಥಾದ್ದು ಕ್ಲಾಂಡಸ್ಟೈನ್ ಆಪರೇಷನ್ಸ್‌ಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೆಎಸ್‌ಆರ್‌ಟಿಸಿಯವರು ಸಾಕಷ್ಟು ಬಸ್‌ಗಳನ್ನು ಓಡಿಸಿ ಪ್ರಯಾಣಿಕರಿಗೆ ಅನುಕೂಲ ಕೊಡಲಿಕ್ಕೆ ಶಕ್ತಿಯಾಗುವವರೆಗೂ ಕೂಡ ಆ ಕ್ಲಾಂಡಸ್ಟೈನ್ ಆಪರೇಷನ್ಸ್ ಅನ್ನು ನಿಲ್ಲಿಸುವುದಕ್ಕೆ ಹೋದರೆ ಪ್ರಯಾಣಿಕರಿಗೆ ತೊಂದರೆಯಾಗುತ್ತದೆ. ಅದರಿಂದ ಬ್ಯಾಲೆನ್ಸ್ ಅನ್ನು ಸ್ಟ್ರೈಕ್ ಮಾಡಬೇಕು. ಅದನ್ನು ಮಾಡುತ್ತೇನೆ.

ವಿಷಯ:- ಬೆಂಗಳೂರು-ಮೈಸೂರು ತಡೆರಹಿತ ಸುವಿಹಾರಿ ವಾಹನಗಳ ದುರಸ್ತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 86 (592)

ಶ್ರೀ ಇ.ಮಾರುತೀರಾವ್ ಪವಾರ್ (ನರಸಿಂಹರಾಜ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬೆಂಗಳೂರು-ಮೈಸೂರು ತಡೆರಹಿತ ಸುವಿಹಾರಿ ವಾಹನಗಳ ಆಸನಗಳು, ಕಿಟಕಿ-ಗಾಜು ಇವೆಲ್ಲಾ ವ್ಯವಸ್ಥೆಯು ಸುವಿಹಾರಿಯಲ್ಲಿ ಅವ್ಯವಸ್ಥೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂದ್ಯಾ (ಸಾರಿಗೆ ಸಚಿವರು):-

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೆಲವು ವಾಹನಗಳ ಗಾಜು, ಆಸನಗಳು ಅಲುಗಾಡುವಿಕೆಯು ಗಮನಕ್ಕೆ ಬಂದಿದೆ.

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು 3.5 ಲಕ್ಷ ಕಿ.ಮಿ. ಕ್ರಮಿಸಿದ ನಂತರ